

## ತೆಂಗಿನ ಕಾಯಿಗೆ ಕಣ್ಣೆಷ್ಟು?

ಮೂರು ಕಣ್ಣುಗಳಿರುವ ಶಿವನ ಪ್ರತಿರೂಪವಾಗಿ ತೆಂಗಿನಕಾಯಿಯನ್ನು ಕೂಡ 'ಮುಕ್ಕಣ್ಣ' ಎನ್ನುತ್ತಾರೆ. ತೆಂಗಿನ ಕಾಯಿಯನ್ನು ಶಿವನ ಪ್ರತಿರೂಪವಾಗಿ ಆಸ್ತಿಕರು ಪೂಜಿಸುತ್ತಾರೆ. ಅದೇ ತೆಂಗಿನಕಾಯಿಗೆ ಎರಡು ಅಥವಾ ನಾಲ್ಕು ಕಣ್ಣುಗಳಿದ್ದರೆ ಆಗ ಆ ಕಾಯಿಯನ್ನು ಏನೆಂದು ಕರೆಯಬಹುದು? ಈ ಚಿತ್ರದಲ್ಲಿರುವ ತೆಂಗಿನಕಾಯಿಗಳನ್ನು ನೋಡಿದಾಗ ಈ ಪ್ರಶ್ನೆ ನಮ್ಮನ್ನು ಕಾಡದಿರದು. ಶಿರಸಿಯ ಕೃಷಿಕರೊಬ್ಬರ ತೆಂಗಿನತೋಟದಲ್ಲಿ ಇಂಥದ್ದೊಂದು ವಿಶೇಷ ಕಾಯಿಗಳು ಆಗಾಗ ಲಭಿಸುತ್ತಿವೆ. ಕೆಲವೊಮ್ಮೆ ಯಾರ ಗಮನಕ್ಕೂ ಬಾರದೇ ಹೋದರೂ, ಈ ಸಲ ಕಾಯಿಯನ್ನು ಸುಲಿಯುವಾಗ ಯಜಮಾನ ಕಾಯಿಯ ಕಣ್ಣುಗಳನ್ನು ಲೆಕ್ಕಹಾಕಿ ಅದರ ವಿಶೇಷಕ್ಕೆ ಬೆರಗಾಗಿದ್ದಾರೆ. ಒಂದು ತೆಂಗಿನಕಾಯಿಗೆ ಎರಡು ಕಣ್ಣು ಇದ್ದರೆ, ಮತ್ತೊಂದು ತೆಂಗಿನಕಾಯಿಗೆ ನಾಲ್ಕು ಕಣ್ಣು ಇರುವುದು ಗಮನಕ್ಕೆ ಬಂದಿದೆ.


–ಅರ್ಚನಾ ಜಿ. ಬೊಮ್ನಳ್ಳಿ, ಶಿರಸಿ



## ಇದು ಕೇರಳದ ವಾಡೆ

ಚಿತ್ರದಲ್ಲಿ ಕಾಣುತ್ತಿರುವುದು 'ವಾಡೆ'. ಕೇರಳದ ವಯನಾಡು ಜಿಲ್ಲೆಯ ಅಂಬಲವಾಯಲ ಗ್ರಾಮದಲ್ಲಿನ ಸಂಗ್ರಹಾಲಯದಲ್ಲಿ ಕಂಡ ಇದನ್ನು 'ವಾಡೆವು' ಎಂದೂ ಕರೆಯಲಾಗುತ್ತದೆ. ಅಲ್ಲಿನ ಗಿರಿಜನರು ದವಸ ಧಾನ್ಯಗಳನ್ನು ಸಂಗ್ರಹಿಸಲು ಬಿದಿರನ್ನು ಸೀಳಿದ ಉದ್ದನೆಯ ಕಡ್ಡಿಗಳನ್ನು ವೃತ್ತಾಕಾರವಾಗಿ ಜೋಡಿಸಿ ಮಾಡಿದ ಉದ್ದನೆಯ ಉಪಕರಣವಿದು. ಧಾನ್ಯ ತುಂಬಿದ ಮೇಲೆ ಭದ್ರವಾಗಿ ಮುಚ್ಚಳ ಮುಚ್ಚಿ ಇಡುತ್ತಿದ್ದರು. ಧಾನ್ಯ ಬೇಕಾದಾಗ ತೆಗೆಯಲು ಅದರ ಕೆಳಗೆ ಒಂದು ರಂಧ್ರ ಇದ್ದು ಕೈಯಿಂದ ಬೇಕಾದಷ್ಟು ಧಾನ್ಯವನ್ನು ತೆಗೆದು ನಂತರ ಆ ರಂಧ್ರವನ್ನು ಬಟ್ಟೆಯಿಂದ ಗಾಳಿ ಹೋಗದಂತೆ ಗಟ್ಟಿಯಾಗಿ ಮುಚ್ಚುತ್ತಿದ್ದರು. ನಮ್ಮ ರಾಜ್ಯದ ಹಳ್ಳಿಗಳಲ್ಲೂ ಈ ಹಿಂದೆ ಉಪಯೋಗಿಸುತ್ತಿದ್ದರು. ನನ್ನ ಅಜ್ಜಿಯ ಮನೆಯಲ್ಲಿ ಇದನ್ನು ನೋಡಿದ ನೆನಪು ಚೆನ್ನಾಗಿದೆ.

–ಲಕ್ಷ್ಮಣ್ ಗೊರ್ಲಕಟ್ಟೆ, ಮೈಸೂರು



## ಹಣ್ಣಡಿಕೆ; ಹೀಗೂ ಒಣಗಿಸಬಹುದೇ?

ಮಲೆನಾಡಿನಲ್ಲಿ ಮೂರು ತಿಂಗಳು ಅಡಿಕೆಯ ಕೊಯ್ಲಿನ ಸುಗ್ಗಿಯಲ್ಲಿ ಅಡಿಕೆಯನ್ನು ಬಿಸಿಲಿಗೆ ಒಣಗಿಸುವುದೆಂದರೆ ಹರಸಾಹಸ ಪಡಬೇಕಾಗುತ್ತದೆ. ಅದರಲ್ಲೂ ಇಳಿಜಾರಿನ ಘಟ್ಟ ಪ್ರದೇಶವಾದುದ್ದರಿಂದ ಹಣ್ಣಡಿಕೆ ಹರಡಲು ಸಮತಟ್ಟು ಜಾಗದ ಕೊರತೆ ಈ ಸಂದರ್ಭದಲ್ಲಿ ವಿಶೇಷವಾಗಿ ಕಾಡುತ್ತದೆ. ಆದರೆ ಉತ್ತರ ಕನ್ನಡದ ಯಲ್ಲಾಪುರ ತಾಲ್ಲೂಕಿನ ಬೀಗಾರಿನ ರಾಜೇಂದ್ರ ಗಾಂವ್ಕಾರ ಅವರು ಇರುವ ಕಡಿಮೆ ಪ್ರದೇಶದಲ್ಲಿ ಹೆಚ್ಚಿನ ಅಡಿಕೆ ಬೆಳೆ ಒಣಗಿಸಲು ಈ ರೀತಿಯ ಕ್ರಮ ಕಂಡುಕೊಂಡಿದ್ದಾರೆ. ಅಂದರೆ ಧರೆಗೆ ಬಿದಿರಿನ ಕೋಲು ಹುಗಿದು ಮತ್ತು ಸೊಪ್ಪಿನ ಮರದಿಂದ ಮರಕ್ಕೆ ತಂತಿ ಮತ್ತು ಅಡಿಕೆ ದಬ್ಬೆ ಕಟ್ಟಿ ಅಡಿಕೆ ಗೊನೆಗಳನ್ನು ಈ ಬಗೆ ನೇತು ಹಾಕಿದ್ದಾರೆ. ಇದರಿಂದ ಒಂದೇ ಕಡೆ ಅಡಿಕೆ ರಾಶಿಯಾಗಿ ಬೀಳದೇ ಬಿಡಿ ಬಿಡಿಯಾಗಿ ಸೂರ್ಯನ ಬಿಸಿಲು ಬಿದ್ದು ಬೇಗನೆ ಒಣಗುತ್ತದೆ. ಇರುವ ಕಡಿಮೆ ಭೂಮಿಯಲ್ಲಿಯೇ ಇಳುವರಿಯನ್ನು ಹಾಳಾಗದಂತೆ ಸಂಸ್ಕರಿಸುವ ಈ ಉಪಾಯ ಇತರರಿಗೂ ಮಾದರಿ.

–ದತ್ತಾತ್ರೇಯ ಭಟ್ಟ ಕಣ್ಣೆಪಾಲ, ಯಲ್ಲಾಪುರ

## ಇದು ರಿಕ್ಷಾವಾಲರ ಕನ್ನಡ ಐಸಿರಿ

ಕನ್ನಡದ ನೆಲ, ಜಲ, ಭಾಷೆ, ಸಾಹಿತ್ಯ, ಸಂಸ್ಕೃತಿ ಇವೆಲ್ಲವುಗಳ ಸಂರಕ್ಷಣೆ ಮತ್ತು ಸಮೃದ್ಧಿಯ ಸದುದ್ದೇಶದಿಂದ ನಾಲ್ವಡಿ ಕೃಷ್ಣರಾಜ ಒಡೆಯರ್ ಒತ್ತಾಸೆಯಂತೆ 1915ರಲ್ಲಿ ಸ್ಥಾಪಿತವಾದ ಕರ್ನಾಟಕ ಸಾಹಿತ್ಯ ಪರಿಷತ್ತು, ತದ ನಂತರ ಕನ್ನಡ ಸಾಹಿತ್ಯ ಪರಿಷತ್ತು ಎಂಬ ನಾಮಾಂಕಿತದಿಂದ ಕ್ರಿಯಾಶೀಲವಾಯಿತು. ಅಂದಿನಿಂದ ಇಂದಿನವರೆಗೂ ಯಾವುದೇ ಸಂದರ್ಭದಲ್ಲೂ ಮುಗ್ಗರಿಸಿ, ಮುಕ್ಕಾಗಿ ಅಳಿಸಿ ಹೋಗದೆ ನಿರಂತರ ಕಾರ್ಯ ಚಟುವಟಿಕೆಗಳಿಂದ, ಕನ್ನಡಿಗರೆಲ್ಲರ ಪ್ರಾತಿನಿಧಿಕ ಸೇವಾ ಸಂಸ್ಥೆಯಾಗಿ ತಾಲ್ಲೂಕು, ಹೋಬಳಿ, ಗ್ರಾಮ, ಮನೆಯಂಗಳವನ್ನೂ ತಲುಪುವಲ್ಲಿ ಯಶಸ್ವಿಯಾಗಿದೆ.

ಕನ್ನಡ ರಾಜ್ಯೋತ್ಸವ, ಕನ್ನಡ ಸಾಹಿತ್ಯ ಸಮ್ಮೇಳನ ಇವೇ ಮೊದಲಾದ ಕನ್ನಡದ ಕಾರ್ಯಕ್ರಮಗಳಲ್ಲಿ ಮುಖ್ಯವಾಗಿ ವಿದ್ಯಾರ್ಥಿಗಳನ್ನು ಮೆರವಣಿಗೆ, ಸ್ತಬ್ಧಚಿತ್ರದಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲಾಗುವುದು. ಕನ್ನಡ ನಮ್ಮ ಅಸ್ಮಿತೆ ಎನ್ನುವುದಕ್ಕೆ ನಿದರ್ಶನವೆಂಬಂತೆ, ಗ್ರಾಮ ಗ್ರಾಮಗಳಲ್ಲಿ ಸಾಮೂಹಿಕ ಗಣೇಶನ ಉತ್ಸವದಂತೆ ಕನ್ನಡ ರಾಜ್ಯೋತ್ಸವವನ್ನೂ ಆಚರಿಸಲಾಗುವುದು. ಇದೇ 2026 ಜನವರಿ 17 ಮತ್ತು 18 ಈ ಎರಡು ದಿವಸಗಳ ಕಾಲ, ಗ್ರಾಮಾಂತರದವರಿಗೆ ಪ್ರಾತಿನಿಧ್ಯ ನೀಡಬೇಕೆಂಬ ಉದ್ದೇಶದಿಂದ ಕೊಪ್ಪ ತಾಲೂಕು ಕೊಗ್ರೆ ಶಾಂತಿ ಗ್ರಾಮದಲ್ಲಿ ತಾಲ್ಲೂಕು ಮಟ್ಟದ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಹಮ್ಮಿಕೊಳ್ಳಲಾಗಿತ್ತು.

ಗ್ರಾಮೀಣ ಪ್ರದೇಶದ ಜನ ಕಾಫಿ ತೋಟದಲ್ಲಿ ಹಣ್ಣು ಕೊಯ್ಯುವ ಕೆಲಸವಿದ್ದಾಗಲೂ ಸ್ವಲ್ಪ ಬಿಡುವು ಮಾಡಿಕೊಂಡು ತೋರಣ, ಚಪ್ಪರ, ಸ್ವಾಗತ ದ್ವಾರಗಳ ನಿರ್ಮಾಣ ಕಾರ್ಯಗಳನ್ನು ಸ್ವಇಚ್ಛೆಯಿಂದ, ಕನ್ನಡದ ಅಭಿಮಾನದಿಂದ ಮಾಡಿದರು. ಅಂತೆಯೇ ಸಮ್ಮೇಳನಾಧ್ಯಕ್ಷರ ಮೆರವಣಿಗೆಗೆ ಸ್ತಬ್ಧಚಿತ್ರಗಳನ್ನು ನಿರ್ಮಿಸಿ ತಾವೂ ಮೆರವಣಿಗೆಯಲ್ಲಿ ಪಾಲ್ಗೊಂಡು ಸಂಭ್ರಮಿಸಿದರು. ರಿಕ್ಷಾವಾಲರೊಬ್ಬರು ಬಾಳೆ ದಿಂಡು, ಹೂಗಳನ್ನು ಬಳಸಿ ತಮ್ಮ ವಾಹನವನ್ನು 'ಕನ್ನಡ ಐಸಿರಿ ರಥ'ವನ್ನಾಗಿಸಿ ಸಮ್ಮೇಳನಾಧ್ಯಕ್ಷರ ಮೆರವಣಿಗೆಯಲ್ಲಿ ಮುನ್ನೆಲೆಯಲ್ಲಿ ಪಾಲ್ಗೊಂಡಿದ್ದು, ಎಲ್ಲರ ಆಕರ್ಷಣೆಗೆ ಕಾರಣವಾಯಿತು.

–ಎಸ್.ಎನ್. ಚಂದ್ರಕಲಾ, ಕೊಪ್ಪ

